1

# ಕುವೆಂಪು ವಿಶ್ವವಿದ್ಯಾಲಯ

# ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು

## ಸಭಾ ದಿನಾಂಕ :22-09-2023


ಪ್ರಾಧಿಕಾರಗಳ ವಿಭಾಗ

ಜ್ಞಾನಸಹ್ಯಾದ್ರಿ, ಶಂಕರಘಟ್ಟ – 577 451

ಶಿವಮೊಗ್ಗ ಜಿಲ್ಲೆ.

ಫ್ಯಾಕ್ಸ್: 08282-256262 ☎ 08282-256148 (ಪ್ರಾಧಿಕಾರಗಳ ವಿಭಾಗ)
ಇ-ಮೇಲ್:drsyndicateku@gmail.com ವೆಬ್‌ಸೈಟ್:www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ವಿಶ್ವವಿದ್ಯಾಲಯ ಕಾರ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ- 577 451

ಸಂಖ್ಯೆ: ಕುವಿ:ಯುಎಟಿ-1:ಸಿಂ-6: 338 :2023-24 ದಿನಾಂಕ:06-10-2023

ಮಾನ್ಯರೆ,

ವಿಷಯ: ದಿನಾಂಕ:22-09-2023 ರಂದು ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭೆಯ ನಡಾವಳಿಗಳು.

* * *

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ – 2000ರ ಪ್ರಕರಣ – 29(w)ರ ಪ್ರಕಾರ ರಚಿಸಲಾಗಿರುವ/ ಅನುಸರಿಸಲಾಗುತ್ತಿರುವ ವಿಶ್ವವಿದ್ಯಾಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು- ಅಧ್ಯಾಯ- III ರ ಪ್ರಕರಣ- 16 ರನ್ವಯ ದಿನಾಂಕ:22-09-2023 ರಂದು ವಿಶ್ವವಿದ್ಯಾಲಯದ ಆಡಳಿತ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭೆಯ ನಡಾವಳಿಗಳನ್ನು ಈ ಮೂಲಕ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ವಿಶ್ವವಿದ್ಯಾಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು – ಅಧ್ಯಾಯ-IIIರ ಪ್ರಕರಣ – 16 ರ ಪ್ರಕಾರ ಸದರಿ ನಡಾವಳಿಗಳು ತಲುಪಿದ **07 ದಿನಗಳೊಳಗೆ ತಮ್ಮಿಂದ ನಡಾವಳಿಗಳ ದಾಖಲಾತಿಯ ಬಗ್ಗೆ ಯಾವುದೇ ಆಕ್ಷೇಪಣೆ** ಬಾರದಿದ್ದಲ್ಲಿ ನಡಾವಳಿಗಳ ದಾಖಲಾತಿಯು ಸರಿಯಾಗಿದೆಯೆಂದು ಭಾವಿಸಲಾಗುವುದು.

ತಮ್ಮ ವಿಶ್ವಾಸಿ,

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

ಗೆ,

ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ.

ಪ್ರತಿಗಳು:

1) ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಕರ್ನಾಟಕ ಸರ್ಕಾರದ ಸಚಿವಾಲಯಗಳು ಬಹುಮಹಡಿಗಳ ಕಟ್ಟಡ, ಡಾ.ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು.
3) ಆಯುಕ್ತರು, ಕಾಲೇಜು ಶಿಕ್ಷಣ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
4) ಕುಲಸಚಿವರು(ಪರೀಕ್ಷಾಂಗ) ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
5) ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
6) ನಿಕಾಯಗಳ ಡೀನರುಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
7) ಗ್ರಂಥಪಾಲಕರು, ವಿಶ್ವವಿದ್ಯಾಲಯ ಗ್ರಂಥಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
8) ನಿರ್ದೇಶಕರು, ಐ.ಕ್ಯೂ.ಎ.ಸಿ./ಪಿ.ಎಂ.ಇ/ ಸಿ.ಡಿ.ಸಿ/ ಶಾರೀರಿಕ ಶಿಕ್ಷಣ/ ವಿದ್ಯಾರ್ಥಿ ಕ್ಷೇಮಪಾಲನ/ ಪ್ರಸಾರಾಂಗ/ ದೂರ ಶಿಕ್ಷಣ ನಿರ್ದೇಶನಾಲಯ ವಿಭಾಗ, ಮಹಿಳಾ ಅಧ್ಯಯನ ಕೇಂದ್ರ, ಯು.ಸಿ.ಸಿ.ಎಫ್, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
9) ನಿರ್ದೇಶಕರು / ಜ್ಯೂನಿಯರ್ ಕಂಪ್ಯೂಟರ್ ಪ್ರೊಗ್ರಾಮರ್, ಯು.ಸಿ.ಸಿ.ಎಫ್. ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ – ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಸೇರ್ಪಡಿಸುವುದು.
10) ಎಲ್ಲಾ ಅಧ್ಯಕ್ಷರು, ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ./ಶಿವಮೊಗ್ಗ/ ಕಡೂರು/ ಚಿಕ್ಕಮಗಳೂರು.
11) ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರುಗಳು/ ಶಾಖಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ/ಶಿವಮೊಗ್ಗ/ಕಡೂರು.
12) ಪ್ರಾಂಶುಪಾಲರು, ಸಹ್ಯಾದ್ರಿ ಕಲಾ ಕಾಲೇಜು / ಸಹ್ಯಾದ್ರಿ ವಿಜ್ಞಾನ ಕಾಲೇಜು/ ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣೆ ಕಾಲೇಜು, ಶಿವಮೊಗ್ಗ.
13) ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಬಿ.ಹೆಚ್ ರಸ್ತೆ ಕಡೂರು.
14) ಸಂಯೋಜನಾಧಿಕಾರಿಗಳು, ಸ್ನಾತಕೋತ್ತರ ಕೇಂದ್ರ, ಐ.ಡಿ.ಎಸ್.ಜಿ ಕಾಲೇಜು ಕಟ್ಟಡ, ಕುವೆಂಪು ವಿಶ್ವವಿದ್ಯಾಲಯ, ಚಿಕ್ಕಮಗಳೂರು.
15) ಸಂಚಾಲಕರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಘಟಕ/ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಘಟಕ, ವಿದ್ಯಾರ್ಥಿಗಳ ಉತ್ತೇಜನ ಸೇವಾ ಕೇಂದ್ರ, ವಿದ್ಯಾರ್ಥಿಗಳ ಸೌಲಭ್ಯ ಸಮುಚ್ಚಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
16) ಕಾರ್ಯಪಾಲಕ ಅಭಿಯಂತರರು, ಇಂಜಿನಿಯರಿಂಗ್ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
17) ಸಾರ್ವಜನಿಕ ಸಂಪರ್ಕಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
18) ಆಪ್ತಕಾರ್ಯಾಲಯ ಕುಲಪತಿಗಳು: ಕುಲಸಚಿವರು: ಕುಲಸಚಿವರು(ಮೌಲ್ಯಮಾಪನ):ಹಣಕಾಸು ಅಧಿಕಾರಿಗಳು. ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
19) ಕಛೇರಿ ಪ್ರತಿ / ರಕ್ಷಣಾ ಕಡತ.

PROCEEDINGS COVE LETTER2

# ಕುವೆಂಪು ವಿಶ್ವವಿದ್ಯಾಲಯ

ದಿನಾಂಕ:22-09-2023 ರಂದು ಶುಕ್ರವಾರ ಪೂರ್ವಾಹ್ನ 11.00 ಗಂಟೆಗೆ "ಶತಮಾನೋತ್ಸವ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಂಗಣ" ಇಲ್ಲಿ ನಡೆದ ಸಿಂಡಿಕೇಟ್ ಸಾಮಾನ್ಯ ಸಭೆ"ಯ ನಡಾವಳಿಗಳು.

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಎಸ್. ವೆಂಕಟೇಶ, ಕುಲಪತಿಗಳು (ಪ್ರಭಾರ) | ಅಧ್ಯಕ್ಷರು |
| 2. | ಶ್ರೀ ಸ್ನೇಹಲ್ ಸುಧಾಕರ್ ಲೋಖಂಡೆ ಐ.ಎ.ಎಸ್., ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |
| 3. | ಪ್ರೊ. ಗೋಪಿನಾಥ್, ಎಸ್.ಎಂ., ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 4. | ಡಾ. ವಿಷ್ಣುಮೂರ್ತಿ ಕೆ.ಎ, ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರ ಪ್ರತಿನಿಧಿ | ಸದಸ್ಯರು |
| 5. | ಶ್ರೀ ಶಾಂತಕುಮಾರ್ ಜಿ.ಎಸ್. | ಸದಸ್ಯರು |
| 6. | ಶ್ರೀ ಶಶಿಧರ್ ಬಿ.ಎನ್. | ಸದಸ್ಯರು |
| 7. | ಪ್ರೊ. ಚಂದ್ರಶೇಖರ್ ಕೆ. | ಸದಸ್ಯರು |
| 8. | ಡಾ. ಎ.ಟಿ. ಪದ್ಮೇಗೌಡ, ಪ್ರಾಂಶುಪಾಲರು | ಸದಸ್ಯರು |
| 9. | ಶ್ರೀ ವಿನಯ್‌ಕುಮಾರ್ ಶೆಟ್ಟಿ, ಪ್ರಾಂಶುಪಾಲರು | ಸದಸ್ಯರು |
| 10. | ಡಾ. ಎಂ. ಸ್ವಾಮಿ, ಪ್ರಾಂಶುಪಾಲರು | ಸದಸ್ಯರು |
| 11. | ಡಾ. ಸಂಧ್ಯಾ ಕಾವೇರಿ ಕೆ, ಪ್ರಾಂಶುಪಾಲರು | ಸದಸ್ಯರು |

**ಗೈರುಹಾಜರಾದ ಸದಸ್ಯರು:**

| | | |
|---|---|---|
| 1. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 2. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 3. | ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 4. | ಆಯುಕ್ತರು, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. | ಸದಸ್ಯರು |

**ಪೂರ್ವಾನುಮತಿಯೊಂದಿಗೆ ಗೈರು ಹಾಜರಾದ ಸದಸ್ಯರು:**

ಯಾರು ಇರುವುದಿಲ್ಲ.

**ಪ್ರಸ್ತಾವನೆ:** ಪ್ರಾರಂಭದಲ್ಲಿ ಸಭೆಗೆ ಆಗಮಿಸಿದ ಸದಸ್ಯರುಗಳೆಲ್ಲರಿಗೂ ಮಾನ್ಯ ಕುಲಸಚಿವರು ಆತ್ಮೀಯವಾಗಿ ಸ್ವಾಗತ ಕೋರಿದರು. ಘನತೆವೆತ್ತ ಕುಲಾಧಿಪತಿಗಳಿಂದ ವಿಶ್ವವಿದ್ಯಾಲಯದ ಕುಲಪತಿಗಳಾಗಿ(Acting) ನೇಮಕಗೊಂಡ ವಾಣಿಜ್ಯ ನಿಕಾಯದ ಡೀನರಾದ ಪ್ರೊ. ವೆಂಕಟೇಶ್, ಕರ್ನಾಟಕ ಸರ್ಕಾರದಿಂದ ಕುಲಸಚಿವ (ಆಡಳಿತ) ಹುದ್ದೆಗೆ ನೇಮಕಗೊಂಡ ಶ್ರೀ ಸ್ನೇಹಲ್ ಸುಧಾಕರ್ ಲೋಖಂಡೆ,ಐ.ಎ.ಎಸ್., ಹಾಗೂ ಕುಲಸಚಿವ (ಮೌಲ್ಯಮಾಪನ) ಆಗಿ ನೇಮಕಗೊಂಡ ಪ್ರೊ. ಗೋಪಿನಾಥ್, ಎಸ್.ಎಂ. ಇವರನ್ನು ಅಭಿನಂದಿಸಿ ಸನ್ಮಾನಿಸಲಾಯಿತು.

ನಂತರ ಕಾರ್ಯಸೂಚಿಯನ್ವಯ ವಿಷಯಗಳನ್ನು ಕೈಗೆತ್ತಿಕೊಳ್ಳಲಾಯಿತು.

## ಪ್ರಾಧಿಕಾರ ವಿಭಾಗ

**2023–ಸಿಂ–6.01:** ಸ್ನಾತಕ ವಾಣಿಜ್ಯಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸಿರುವ ಕುರಿತು.

**ನಿರ್ಣಯ:** ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ-2000, ಪ್ರಕರಣ 33(1) ಮತ್ತು (2)ರನ್ವಯ ಹಾಗೂ ಸಿಂಡಿಕೇಟ್ ಪ್ರಾಧಿಕಾರಗಳ ನಿರ್ವಹಣೆ ಹಾಗೂ ವ್ಯವಹಾರಗಳ ಅಧಿನಿಯಮ-2018 ಪ್ರಕರಣ(2) ಮತ್ತು (6)ರ ಪ್ರಕಾರ ಸ್ನಾತಕ ವಾಣಿಜ್ಯಶಾಸ್ತ್ರ ಅಧ್ಯಯನ ಮಂಡಳಿಯನ್ನು ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ ರಚಿಸಲಾಗಿದ್ದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಘಟನೋತ್ತರವಾಗಿ ಅನುಮೋದಿಸಿ ಸ್ಥಿರೀಕರಿಸಿತು.

**2023–ಸಿಂ–6.02:** ಸ್ನಾತಕ ರೇಷ್ಮೆ ಮತ್ತು ಪ್ರಾಣಿಶಾಸ್ತ್ರ (ಸಂಯುಕ್ತ) ಅಧ್ಯಯನ ಮಂಡಳಿಯನ್ನು ಪುನರ್‌ರಚಿಸಿರುವ ಕುರಿತು.

**ನಿರ್ಣಯ:** ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ–2000, ಪ್ರಕರಣ 33(1) ಮತ್ತು (2)ರನ್ವಯ ಹಾಗೂ ಸಿಂಡಿಕೇಟ್ ಪ್ರಾಧಿಕಾರಗಳ ನಿರ್ವಹಣೆ ಹಾಗೂ ವ್ಯವಹಾರಗಳ ಅಧಿನಿಯಮ–2018 ಪ್ರಕರಣ(2) ಮತ್ತು (6)ರ ಪ್ರಕಾರ ಸ್ನಾತಕ ರೇಷ್ಮೆ ಮತ್ತು ಪ್ರಾಣಿಶಾಸ್ತ್ರ (ಸಂಯುಕ್ತ) ಅಧ್ಯಯನ ಮಂಡಳಿಯನ್ನು ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ ರಚಿಸಲಾಗಿದ್ದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಘಟನೋತ್ತರವಾಗಿ ಅನುಮೋದಿಸಿ ಸ್ಥಿರೀಕರಿಸಿತು.

**2023–ಸಿಂ–6.03:** ಸ್ನಾತಕೋತ್ತರ ಭೌತಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಬಗ್ಗೆ.

**ನಿರ್ಣಯ:** ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ–2000, ಪ್ರಕರಣ 33(1) ಮತ್ತು (2)ರನ್ವಯ ಹಾಗೂ ಸಿಂಡಿಕೇಟ್ ಪ್ರಾಧಿಕಾರಗಳ ನಿರ್ವಹಣೆ ಹಾಗೂ ವ್ಯವಹಾರಗಳ ಅಧಿನಿಯಮ–2018 ಪ್ರಕರಣ (2) ಮತ್ತು (6)ರ ಪ್ರಕಾರ ಸ್ನಾತಕೋತ್ತರ ಭೌತಶಾಸ್ತ್ರ ಅಧ್ಯಯನ ಮಂಡಳಿಯ ಪರಿಣಿತರ ಪಟ್ಟಿಯನ್ನು ಅನುಮೋದಿಸಿದ ಸಭೆಯು, ಅಧ್ಯಯನ ಮಂಡಳಿ ರಚಿಸಲು ಕುಲಪತಿಯವರಿಗೆ ಅಧಿಕಾರ ನೀಡಿತು.

**2023–ಸಿಂ–6.04:** ಸ್ನಾತಕೋತ್ತರ ಔದ್ಯೋಗಿಕ ರಸಾಯನಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಬಗ್ಗೆ.

**ನಿರ್ಣಯ:** ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ–2000, ಪ್ರಕರಣ 33(1) ಮತ್ತು (2)ರನ್ವಯ ಹಾಗೂ ಸಿಂಡಿಕೇಟ್ ಪ್ರಾಧಿಕಾರಗಳ ನಿರ್ವಹಣೆ ಹಾಗೂ ವ್ಯವಹಾರಗಳ ಅಧಿನಿಯಮ–2018 ಪ್ರಕರಣ (2) ಮತ್ತು (6)ರ ಪ್ರಕಾರ ಸ್ನಾತಕೋತ್ತರ ಔದ್ಯೋಗಿಕ ರಸಾಯನಶಾಸ್ತ್ರ ಅಧ್ಯಯನ ಮಂಡಳಿಯ ಪರಿಣಿತರ ಪಟ್ಟಿಯನ್ನು ಅನುಮೋದಿಸಿದ ಸಭೆಯು, ಅಧ್ಯಯನ ಮಂಡಳಿ ರಚಿಸಲು ಕುಲಪತಿಯವರಿಗೆ ಅಧಿಕಾರ ನೀಡಿತು.

**2023–ಸಿಂ–6.05:** ಸ್ನಾತಕೋತ್ತರ ಜೈವಿಕ ತಂತ್ರಜ್ಞಾನ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಬಗ್ಗೆ.

**ನಿರ್ಣಯ:** ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ–2000, ಪ್ರಕರಣ 33(1) ಮತ್ತು (2)ರನ್ವಯ ಹಾಗೂ ಸಿಂಡಿಕೇಟ್ ಪ್ರಾಧಿಕಾರಗಳ ನಿರ್ವಹಣೆ ಹಾಗೂ ವ್ಯವಹಾರಗಳ ಅಧಿನಿಯಮ–2018 ಪ್ರಕರಣ(2) ಮತ್ತು (6)ರ ಪ್ರಕಾರ ಸ್ನಾತಕೋತ್ತರ ಜೈವಿಕತಂತ್ರಜ್ಞಾನ ಅಧ್ಯಯನ ಮಂಡಳಿಯ ಪರಿಣಿತರ ಪಟ್ಟಿಯನ್ನು ಅನುಮೋದಿಸಿದ ಸಭೆಯು, ಅಧ್ಯಯನ ಮಂಡಳಿ ರಚಿಸಲು ಕುಲಪತಿಯವರಿಗೆ ಅಧಿಕಾರ ನೀಡಿತು.

**2023–ಸಿಂ–6.06:** ಸ್ನಾತಕೋತ್ತರ ರಾಜ್ಯಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಬಗ್ಗೆ.

**ನಿರ್ಣಯ:** ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ–2000, ಪ್ರಕರಣ 33(1) ಮತ್ತು (2)ರನ್ವಯ ಹಾಗೂ ಸಿಂಡಿಕೇಟ್ ಪ್ರಾಧಿಕಾರಗಳ ನಿರ್ವಹಣೆ ಹಾಗೂ ವ್ಯವಹಾರಗಳ ಅಧಿನಿಯಮ–2018 ಪ್ರಕರಣ(2) ಮತ್ತು (6)ರ ಪ್ರಕಾರ ಸ್ನಾತಕೋತ್ತರ ರಾಜ್ಯಶಾಸ್ತ್ರ ಅಧ್ಯಯನ ಮಂಡಳಿಯನ್ನು ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ ರಚಿಸಲಾಗಿದ್ದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯ ಅನುಮೋದನೆಗಾಗಿ ಮಂಡಿಸಲಾಯಿತು. ಸುದೀರ್ಘ ಚರ್ಚೆಯ ನಂತರ ಆಂತರಿಕ ಸದಸ್ಯರಾದ ಪ್ರೊ. ಎ.ಷಣ್ಮುಖ ಇವರನ್ನು ಹೊರತುಪಡಿಸಿ ಪರಿಷ್ಕೃತ ಸ್ನಾತಕೋತ್ತರ ರಾಜ್ಯಶಾಸ್ತ್ರ ಅಧ್ಯಯನ ಮಂಡಳಿಯನ್ನು ರಚಿಸಲು ಸಭೆಯು ನಿರ್ಣಯಿಸಿತು.

## ಮಾನವ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗ

**2023–ಸಿಂ–6.07:** ಸ್ನಾತಕೋತ್ತರ ಸೂಕ್ಷ್ಮಾಣು ಜೀವಶಾಸ್ತ್ರ ಅಧ್ಯಯನ ವಿಭಾಗಕ್ಕೆ ವಿಭಾಗಾಧ್ಯಕ್ಷರನ್ನು ನೇಮಿಸಿರುವುದನ್ನು ಸ್ಥಿರೀಕರಿಸುವ ಕುರಿತು.

**ನಿರ್ಣಯ:** ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 34(7) ಅನ್ವಯ ಡಾ.ಬಿ. ತಿಪ್ಪೇಸ್ವಾಮಿ, ಪ್ರಾಧ್ಯಾಪಕರು ಇವರನ್ನು ಸಿಂಡಿಕೇಟ್ ಸಭೆಯ ಅನುಮೋದನೆ ಕಾಯ್ದಿರಿಸಿ, ಸ್ನಾತಕೋತ್ತರ ಸೂಕ್ಷ್ಮಾಣುಜೀವಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಅಧ್ಯಕ್ಷರಾಗಿ ದಿನಾಂಕ:21-08-2023ರಿಂದ ಅನ್ವಯವಾಗುವಂತೆ 02 ವರ್ಷಗಳ ಅವಧಿಗೆ ನೇಮಕ ಮಾಡಿರುವ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಘಟನೋತ್ತರವಾಗಿ ಅನುಮೋದಿಸಿ ಸ್ಥಿರೀಕರಿಸಿತು.

**2023–ಸಿಂ–6.08:** ಡಾ. ಸರಳ ಕೆ.ಎಸ್., ಪ್ರಾಧ್ಯಾಪಕರು ಇವರನ್ನು ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು (ಘಟಕ ಕಾಲೇಜು) ಶಿವಮೊಗ್ಗ, ಕುವೆಂಪು ಇಲ್ಲಿಂದ ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾಲಯಕ್ಕೆ ವರ್ಗಾವಣೆ ಕೋರಿರುವ ಕುರಿತು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ ಡಾ. ಸರಳ ಕೆ.ಎಸ್., ಪ್ರಾಧ್ಯಾಪಕರು, ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು (ಘಟಕ ಕಾಲೇಜು) ಶಿವಮೊಗ್ಗ, ಇವರನ್ನು ಮೈಸೂರು ವಿಶ್ವವಿದ್ಯಾಲಯದ ಘಟಕ ಕಾಲೇಜಾದ ಮಹಾರಾಜ ಕಾಲೇಜು, ಮೈಸೂರು ಇಲ್ಲಿಗೆ ಹುದ್ದೆರಹಿತವಾಗಿ ವರ್ಗಾವಣೆ ಹೊಂದಲು ನಿರಪೇಕ್ಷಣಾ ಪತ್ರ ನೀಡಲು ಸಭೆಯು ಅನುಮತಿಸಿತು.

**2023–ಸಿಂ–6.09:** ಶ್ರೀ ಶಂಕರಪ್ಪ ಬಿ, ಜೂನಿಯರ್ ಕಂಪ್ಯೂಟರ್ ಪ್ರೋಗ್ರಾಮರ್ ಇವರಿಗೆ ವೈದ್ಯಕೀಯ ಚಿಕಿತ್ಸೆಗಾಗಿ ಮುಂಗಡ ಪಾವತಿಸಿರುವ ಆದೇಶದ ಸ್ಥಿರೀಕರಣ ಕುರಿತು.

**ನಿರ್ಣಯ:** ಶ್ರೀ ಶಂಕರಪ್ಪ, ಬಿ., ಜ್ಯೂನಿಯರ್ ಕಂಪ್ಯೂಟರ್ ಪ್ರೊಗ್ರಾಮರ್, ಯು.ಸಿ.ಸಿ.ಎಫ್. ಮತ್ತು ಐ.ಟಿ.ಘಟಕ – ಇವರು ಹೃದಯ ಸಂಬಂಧಿತ ತುರ್ತು ಶಸ್ತ್ರಚಿಕಿತ್ಸೆಯನ್ನು ಶಿವಮೊಗ್ಗದ ಸಹ್ಯಾದ್ರಿ ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಪಡೆಯುವ ಸಲುವಾಗಿ, ಆಸ್ಪತ್ರೆಯವರು ನೀಡಿದ್ದ ಅಂದಾಜುಪಟ್ಟಿಯ ಪ್ರಕಾರ ಶೇ.50ರಷ್ಟು ಮೊಬಲಗು ರೂ.1,75,000/- (ಒಂದು ಲಕ್ಷದ ಎಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ ಎ.ಸಿ., ಬಿಲ್ಲಿನ ಮೂಲಕ ಮುಂಗಡವಾಗಿ ಪಾವತಿಸಿದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

**2023–ಸಿಂ–6.10:** ಶ್ರೀ ಜೆ ಪೀರ್ಯಾನಾಯ್ಕ್, ಶಾಖಾಧಿಕಾರಿ ಇವರ ಪತ್ನಿಗೆ ವೈದ್ಯಕೀಯ ಚಿಕಿತ್ಸೆಗಾಗಿ ಮುಂಗಡ ಪಾವತಿಸಿರುವ ಆದೇಶದ ಸ್ಥಿರೀಕರಣ ಕುರಿತು.

**ನಿರ್ಣಯ:** ಶ್ರೀ ಜೆ. ಪೀರ್ಯಾನಾಯ್ಕ, ಶಾಖಾಧಿಕಾರಿ, ಮಾನವ ಸಂಪನ್ಮೂಲ ನಿರ್ವಹಣೆ ವಿಭಾಗ – ಇವರ ಪತ್ನಿಯವರಿಗೆ H1, N1 Pneumonia ಸಂಬಂಧಿತ ಕಾಯಿಲೆಗೆ ತುರ್ತು ಚಿಕಿತ್ಸೆಯನ್ನು ಶಿವಮೊಗ್ಗದ ಸಹ್ಯಾದ್ರಿ ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಪಡೆಯುವ ಸಲುವಾಗಿ, ಆಸ್ಪತ್ರೆಯವರು ನೀಡಿದ ಅಂದಾಜುಪಟ್ಟಿಯ ಪ್ರಕಾರ ಶೇ.50ರಷ್ಟು ಮೊಬಲಗು ರೂ.75,000/- (ಎಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ ಎ.ಸಿ., ಬಿಲ್ಲಿನ ಮೂಲಕ ಮುಂಗಡವಾಗಿ ಪಾವತಿಸಿದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

## ಶೈಕ್ಷಣಿಕ ವಿಭಾಗ

**2023–ಸಿಂ–6.11:** ಸರ್.ಎಂ.ವಿ. ಸರ್ಕಾರಿ ವಿಜ್ಞಾನ ಕಾಲೇಜು, ಬೊಮ್ಮನಕಟ್ಟೆ – ಈ ಸಂಸ್ಥೆಯ, "ಸ್ನಾತಕೋತ್ತರ ಔದ್ಯೋಗಿಕ ರಸಾಯನಶಾಸ್ತ್ರ" ವಿಭಾಗದ "ಸಂಶೋಧನಾ ಕೇಂದ್ರ"ದ ಮಾನ್ಯತೆ ನವೀಕರಿಸುವ ಕುರಿತು.

ನಿರ್ಣಯ: ಸರ್.ಎಂ.ವಿ. ಸರ್ಕಾರಿ ವಿಜ್ಞಾನ ಕಾಲೇಜು, ಬೊಮ್ಮನಕಟ್ಟೆ – ಈ ಕಾಲೇಜಿನ "ಸ್ನಾತಕೋತ್ತರ ಔದ್ಯೋಗಿಕ ರಸಾಯನಶಾಸ್ತ್ರ" ವಿಭಾಗದ "ಸಂಶೋಧನಾ ಕೇಂದ್ರ"ದಲ್ಲಿ ಪ್ರಸ್ತುತ ಲಭ್ಯವಿರುವ ಸಂಶೋಧನಾ ಮಾರ್ಗದರ್ಶಕರು ಹಾಗೂ ಸೌಲಭ್ಯಗಳ ವಿವರಗಳೊಂದಿಗೆ ಮುಂದಿನ ಸಭೆಗೆ ಮಂಡಿಸುವಂತೆ ವಿಷಯವನ್ನು ಮುಂದೂಡಲಾಯಿತು.

2023–ಸಿಂ–6.12: "Smt. Soubhagya and Dr.B.U. Kannappanavar" ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕ ಸ್ಥಾಪನೆ ಬಗ್ಗೆ.

ನಿರ್ಣಯ: ದಾನಿಗಳಾದ ಡಾ.ಬಿ.ಯು. ಕಣ್ಣಪ್ಪನವರ್‌ರವರ ಸಂಶೋಧನಾ ವಿದ್ಯಾರ್ಥಿಗಳು, ಶಿವಮೊಗ್ಗ ಇವರು ಕುವೆಂಪು ವಿಶ್ವವಿದ್ಯಾಲಯದ ವಿಜ್ಞಾನ ನಿಕಾಯದಡಿಯಲ್ಲಿನ ಸ್ನಾತಕೋತ್ತರ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಷಯದಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗೆ "ಶ್ರೀಮತಿ ಸೌಭಾಗ್ಯ ಮತ್ತು ಡಾ.ಬಿ.ಯು.ಕಣ್ಣಪ್ಪನವರ್" ಹೆಸರಿನಲ್ಲಿ ಸ್ವರ್ಣ ಪದಕ ನೀಡುವ ಸಲುವಾಗಿ "ದತ್ತಿನಿಧಿ ಸ್ವರ್ಣಪದಕ" ಸ್ಥಾಪಿಸಲು ಸಭೆಯು ಅನುಮೋದನೆ ನೀಡಿತು ಹಾಗೂ ದತ್ತಿನಿಧಿ ದಾನಿಗಳನ್ನು ಸಭೆಯು ಪ್ರಶಂಸಿಸಿತು.

2023–ಸಿಂ–6.13: "Shanthala Spherocast" ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕ ಸ್ಥಾಪನೆ ಬಗ್ಗೆ.

ನಿರ್ಣಯ: ದಾನಿಗಳಾದ Shanthala Spherocast Private Limited, Shivamogga-Bhadravathi Industrial Area, Machenahalli, Nidige Post, Shivamoga ಇವರು ಕುವೆಂಪು ವಿಶ್ವವಿದ್ಯಾಲಯದ ವಿಜ್ಞಾನ ನಿಕಾಯದಡಿಯಲ್ಲಿನ ಸ್ನಾತಕೋತ್ತರ ಪರಿಸರ ವಿಜ್ಞಾನ ಅಧ್ಯಯನ ವಿಷಯದಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗೆ "Shanthala Spherocast" ಹೆಸರಿನಲ್ಲಿ ಸ್ವರ್ಣ ಪದಕ ನೀಡುವ ಸಲುವಾಗಿ "ದತ್ತಿನಿಧಿ ಸ್ವರ್ಣಪದಕ" ಸ್ಥಾಪಿಸಲು ಸಭೆಯು ಅನುಮೋದನೆ ನೀಡಿತು ಹಾಗೂ ದತ್ತಿನಿಧಿ ಸ್ಥಾಪಿಸಿದ ದಾನಿಗಳ ಬಗ್ಗೆ ಸಭೆಯು ಪ್ರಶಂಸೆ ವ್ಯಕ್ತಪಡಿಸಿತು.

2023–ಸಿಂ–6.14: ಸಹ್ಯಾದ್ರಿ ಕಲಾ ಕಾಲೇಜು, ಶಿವಮೊಗ್ಗ – ಈ ಕಾಲೇಜಿನ "ಸ್ನಾತಕೋತ್ತರ ಇಂಗ್ಲೀಷ್", "ಸ್ನಾತಕೋತ್ತರ ರಾಜ್ಯಶಾಸ್ತ್ರ" ಮತ್ತು "ಸ್ನಾತಕೋತ್ತರ ಅರ್ಥಶಾಸ್ತ್ರ" ವಿಭಾಗಗಳ "ಸಂಶೋಧನಾ ಕೇಂದ್ರ"ದ ಮಾನ್ಯತೆಯನ್ನು ನವೀಕರಿಸುವ ಕುರಿತು.

ನಿರ್ಣಯ: ಸಹ್ಯಾದ್ರಿ ಕಲಾ ಕಾಲೇಜು, ಶಿವಮೊಗ್ಗ – ಈ ಕಾಲೇಜಿನ "ಸ್ನಾತಕೋತ್ತರ ಇಂಗ್ಲೀಷ್", "ಸ್ನಾತಕೋತ್ತರ ರಾಜ್ಯಶಾಸ್ತ್ರ" ಮತ್ತು "ಸ್ನಾತಕೋತ್ತರ ಅರ್ಥಶಾಸ್ತ್ರ" ವಿಭಾಗಗಳ "ಸಂಶೋಧನಾ ಕೇಂದ್ರ"ದ ಮಾನ್ಯತೆಯನ್ನು ನವೀಕರಿಸುವ ವಿಷಯವನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ–2000 ಅನ್ವಯ ಎಲ್ಲಾ ನಿಯಮಗಳನ್ನು ಪರಿಶೀಲಿಸಿ, ಕಾಲೇಜಿನ ಸದರಿ ಸ್ನಾತಕೋತ್ತರ ವಿಭಾಗಗಳಲ್ಲಿನ ಸೌಲಭ್ಯಗಳು ಮಾರ್ಗದರ್ಶಕರು ಮುಂತಾದ ಹೆಚ್ಚಿನ ವಿವರಗಳೊಂದಿಗೆ ಮುಂದಿನ ಸಭೆಗೆ ಮಂಡಿಸುವಂತೆ ವಿಷಯವನ್ನು ಮುಂದೂಡಲಾಯಿತು.

**ಕಾಲೇಜು ಅಭಿವೃದ್ಧಿ ಪರಿಷತ್**

2023–ಸಿಂ–6.15: ಭದ್ರಾವತಿಯ ಹೆಬ್ಬೂರು ಕಲಾ ಮತ್ತು ವಾಣಿಜ್ಯ ಕಾಲೇಜಿನ ದೂರುಗಳ ಕುರಿತು ಸತ್ಯ ಶೋಧನಾ ಸಮಿತಿ ವರದಿಯ ಶಿಫಾರಸ್ಸುಗಳಂತೆ ಕ್ರಮಕೈಗೊಳ್ಳುವ ಬಗ್ಗೆ.

ಚರ್ಚೆ: ಸಭೆಗೆ ಆಹ್ವಾನಿಸಲಾಗಿದ್ದ ಕಾಲೇಜು ಅಭಿವೃದ್ಧಿ ಪರಿಷತ್ತಿನ ನಿರ್ದೇಶಕರು ಮಾಹಿತಿ ನೀಡಿ ಮಾತಾಡುತ್ತಾ, ಭದ್ರಾವತಿಯ ಹೆಬ್ಬೂರು ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಅವ್ಯವಹಾರಗಳು ನಡೆಯುತ್ತಿರುವುದಾಗಿ ವಿಶ್ವವಿದ್ಯಾಲಯಕ್ಕೆ ಸಲ್ಲಿಕೆಯಾಗಿದ್ದ ದೂರುಗಳನ್ನು ಪರಿಶೀಲಿಸಲು ರಚಿಸಿಲಾಗಿದ್ದ ಸತ್ಯ ಶೋಧನಾ ಸಮಿತಿಯು ಕಾಲೇಜಿಗೆ ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ್ದ ವರದಿಯನ್ನು

ದಿನಾಂಕ: 17–03–2023 ರಂದು ನಡೆಸಿ ಸಿಂಡಿಕೇಟ್ ಸಭೆಯು ಅಂಗೀಕರಿಸಿ, ಸಮಿತಿಯ ಶಿಫಾರಸ್ಸುಗಳನ್ವಯ ಕ್ರಮವಹಿಸಲು ನಿರ್ಣಯಿಸಿತ್ತು. ಸಮಿತಿಯ ಶಿಫಾರಸ್ಸು ಹಾಗೂ ಸಿಂಡಿಕೇಟ್ ಸಭೆಯ ನಿರ್ಣಯದಂತೆ ರೂ.1,00,000/– (ಒಂದು ಲಕ್ಷ ರೂಪಾಯಿಗಳು ಮಾತ್ರ) ದಂಡ ಪಾವತಿಸುವಂತೆ ಹಾಗೂ ಇನ್ನುಳಿದ ಶಿಫಾರಸ್ಸುಗಳ ಕುರಿತು ಶೀಘ್ರ ಕ್ರಮ ಕೈಗೊಂಡು ಅನುಪಾಲನಾ ವರದಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸುವಂತೆ ಕಾಲೇಜಿನ ಆಡಳಿತ ಮಂಡಳಿಯ ಕಾರ್ಯದರ್ಶಿಗಳಿಗೆ ಪತ್ರ ಬರೆಯಲಾಗಿದೆ ಹಾಗೂ ಕಾಲೇಜಿನ 2023–24ನೇ ಸಾಲಿನ ಮುಂದುವರಿಕೆ ಸಂಯೋಜನೆಯನ್ನು ಕೂಡ ತಡೆಹಿಡಿಯಲಾಗಿದೆ. ಆದರೆ, ವಿಶ್ವವಿದ್ಯಾಲಯ ವಿಧಿಸಿರುವ ದಂಡಶುಲ್ಕವನ್ನು ಪಾವತಿಸಲು ಕಾಲೇಜಿನ ಆಡಳಿತ ಮಂಡಳಿಯ ಕಾರ್ಯದರ್ಶಿಗಳು ನಿರಾಕರಿಸಿರುತ್ತಾರೆ. ಭದ್ರಾವತಿ ಕ್ಷೇತ್ರದ ಶಾಸಕರು ವಿಶ್ವವಿದ್ಯಾಲಯದ ಸತ್ಯಶೋಧನಾ ಸಮಿತಿಯ ಶಿಫಾರಸ್ಸುಗಳನ್ನು ರದ್ದುಪಡಿಸುವಂತೆ ಪತ್ರ ಬರೆದಿದ್ದಾರೆ. ಅಲ್ಲದೇ, ಕಾಲೇಜಿನ ಪ್ರಾಂಶುಪಾಲರು ಮತ್ತು ಸಿಬ್ಬಂದಿಗಳು 2023–24ನೇ ಸಾಲಿನ ಮುಂದುವರಿಕೆ ಸಂಯೋಜನೆಯ ಆದೇಶ ನೀಡುವಂತೆ ಕೋರಿರುತ್ತಾರೆ. ಈ ಹಿನ್ನೆಲೆಯಲ್ಲಿ, ನಿರ್ಣಯಕ್ಕಾಗಿ ಸಿಂಡಿಕೇಟ್ ಸಭೆಗೆ ವಿಷಯ ಮಂಡಿಸಲಾಗಿದೆ ಎಂದರು.

ಶ್ರೀ ಶಶಿಧರ್, ಬಿ.ಎನ್.,ರವರು ಮಾತನಾಡಿ ಎಸ್.ಸಿ./ಎಸ್.ಟಿ., ವಿದ್ಯಾರ್ಥಿಗಳ ಸ್ಕಾಲರ್‌ಶಿಪ್ ಹಣವನ್ನು ಕಾಲೇಜಿನವರು ದುರುಪಯೋಗ ಪಡಿಸಿಕೊಂಡಿರುವುದು ಗಂಭೀರವಾದ ಕ್ರಿಮಿನಲ್ ಆರೋಪವಾಗುತ್ತದೆ. ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕಾಗುತ್ತದೆ. ಅಲ್ಲದೇ, ಮುಂದುವರಿಕೆ ಸಂಯೋಜನೆ ಇಲ್ಲದಿದ್ದಾಗ್ಯೂ ವಿದ್ಯಾರ್ಥಿಗಳ ಪ್ರವೇಶ ಮಾಡಿಕೊಂಡಿರುವುದು ಕೂಡ ತಪ್ಪು. ಆದುದರಿಂದ, ಪ್ರವೇಶ ಪಡೆದಿರುವ ವಿದ್ಯಾರ್ಥಿಗಳನ್ನು ಸಮೀಪದ ಬೇರೆ ಕಾಲೇಜಿಗೆ ವರ್ಗಾಯಿಸುವುದು ಒಳಿತು ಎಂದರು. ಕುಲಸಚಿವರು ಮಾತನಾಡುತ್ತಾ, ಕಾಲೇಜಿನ ಸಂಯೋಜನೆಯನ್ನು ತಡೆಹಿಡಿಯುವುದರಿಂದ ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಬೇಕು ಎಂದರು. ಸದಸ್ಯರಾದ ಡಾ. ಸಂಧ್ಯಾ ಕಾವೇರಿರವರು ಮಾತನಾಡಿ, ಕಾಲೇಜಿಗೆ ಇನ್ನೊಂದು ನೋಟೀಸ್ ನೀಡಿ ದಂಡಶುಲ್ಕ ಪಾವತಿಸುವಂತೆ ಹಾಗೂ ಸತ್ಯಶೋಧನಾ ಸಮಿತಿಯ ಶಿಫಾರಸ್ಸಿನ ಪ್ರಕಾರ ಕ್ರಮಕೈಗೊಂಡು ಅನುಪಾಲನಾ ವರದಿಯನ್ನು ಸಲ್ಲಿಸುವಂತೆ ತಿಳಿಸಬಹುದು. ಆದರೂ ಪಾಲಿಸದಿದ್ದಲ್ಲಿ ಮುಂದಿನ ಕ್ರಮ ಕೈಗೊಳ್ಳಬಹುದು ಎಂದರು. ಶ್ರೀ ವಿನಯಕುಮಾರ್ ಶೆಟ್ಟಿ ರವರು ಮಾತನಾಡಿ, ಸಂಯೋಜಿತ ಕಾಲೇಜಿನವರು ವಿಶ್ವವಿದ್ಯಾಲಯದ ಆದೇಶಗಳನ್ನು ಪಾಲಿಸದಿದ್ದಲ್ಲಿ ಮುಂದಿನ ದಿನಗಳಲ್ಲಿ ಉಳಿದ ಕಾಲೇಜುಗಳು ಕೂಡ ವಿಶ್ವವಿದ್ಯಾಲಯದ ಆದೇಶಗಳನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ. ಆದುದರಿಂದ, ಈ ಪ್ರಕರಣದಲ್ಲಿ ಶಿಸ್ತುಕ್ರಮ ಕೈಗೊಳ್ಳುವುದು ಅಗತ್ಯ ಎಂದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ, ಭದ್ರಾವತಿಯ ಹೆಬ್ಬೂರು ಕಲಾ ಮತ್ತು ವಾಣಿಜ್ಯ ಕಾಲೇಜಿನ ದೂರುಗಳ ಕುರಿತು ರಚಿಸಲಾಗಿದ್ದ ಸತ್ಯ ಶೋಧನಾ ಸಮಿತಿಯ ಶಿಫಾರಸ್ಸುಗಳಂತೆ ಕಾಲೇಜಿಗೆ ವಿಧಿಸಿರುವ ದಂಡಶುಲ್ಕ ರೂ.1,00,000/– (ಒಂದು ಲಕ್ಷ ರೂಪಾಯಿಗಳು ಮಾತ್ರ) ತಕ್ಷಣವೇ ಪಾವತಿಸುವಂತೆ ಹಾಗೂ ಉಳಿದ ಶಿಫಾರಸ್ಸುಗಳ ಬಗ್ಗೆ ನಿಗದಿತ ಕಾಲಮಿತಿಯೊಳಗೆ ಕ್ರಮ ಕೈಗೊಂಡು ಅನುಪಾಲನಾ ವರದಿಯನ್ನು ಸಲ್ಲಿಸುವಂತೆ ಅಂತಿಮ ನೋಟೀಸ್ ನೀಡಬೇಕು. ಇದನ್ನು ಪಾಲನೆ ಮಾಡಲು ತಪ್ಪಿದಲ್ಲಿ 2023–24ನೇ ಸಾಲಿನಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳನ್ನು ಸಮೀಪದ ಬೇರೆ ಕಾಲೇಜಿಗೆ ವರ್ಗಾಯಿಸುವುದು ಹಾಗೂ ಮುಂದುವರಿಕೆ ಸಂಯೋಜನೆಯನ್ನು ನೀಡಬಾರದು ಎಂದು ನಿರ್ಣಯಿಸಲಾಯಿತು.

## ಪರೀಕ್ಷಾ ವಿಭಾಗ

**2023–ಸಿಂ–6.16:** ದಿನಗೂಲಿ ಆಧಾರದ ಮೇಲೆ 'ಡಾಟ ಎಂಟ್ರಿ ಆಪರೇಟರ್'ಗಳನ್ನು ಯು.ಯು.ಸಿ.ಎಂ.ಎಸ್. ನೇಮಿಸಿಕೊಂಡಿರುವ ಕುರಿತು.

**ನಿರ್ಣಯ:** ಇದರ ಕುರಿತು ಪೂರ್ಣ ವಿವರದೊಂದಿಗೆ ಮುಂದಿನ ಸಭೆಗೆ ಮಂಡಿಸಬೇಕೆಂದು ವಿಷಯವನ್ನು ಮುಂದೂಡಲಾಯಿತು.

**2023–ಸಿಂ–6.17:** "ಪರೀಕ್ಷಾ ಮಂಡಳಿ" (ಬಿ.ಒ.ಇ) ಸಭೆಯಲ್ಲಿ ಭಾಗವಹಿಸುವ ಅಧ್ಯಾಪಕರುಗಳಿಗೆ ದಿನಭತ್ಯೆಯನ್ನು ಹೆಚ್ಚಿಸುವ ಹಾಗೂ ಜಾಗೃತಿ ದಳದ ಸದಸ್ಯರಿಗೆ ಉತ್ತರಪತ್ರಿಕೆಗಳ ಬಂಡಲ್ ಹ್ಯಾಂಡ್ಲಿಂಗ್ ಭತ್ಯೆಯನ್ನು ನೀಡುವ ಕುರಿತು.

**ನಿರ್ಣಯ:** ಚರ್ಚೆಯ ನಂತರ ಪರೀಕ್ಷಾ ಮಂಡಳಿ (ಬಿ.ಒ.ಇ.) ಸದಸ್ಯರಿಗೆ ಪ್ರಸ್ತುತ ನೀಡುತ್ತಿರುವ ಉಪಸ್ಥಿತ ಭತ್ಯೆ/ ದಿನಭತ್ಯೆ ಮೊಬಲಗು ರೂ.850/–ಗಳನ್ನು ಪರಿಷ್ಕರಿಸಿ, ರೂ.150/–ಗಳಷ್ಟು ಹೆಚ್ಚಿಸಿ ದಿನವೊಂದಕ್ಕೆ ರೂ.1,000/–ಗಳನ್ನು ನಿಗದಿಪಡಿಸಲು ಹಾಗೂ ಜಾಗೃತದಳದ ಸದಸ್ಯರ ದಿನಭತ್ಯೆಯಲ್ಲಿ ಯಾವುದೇ ಹೆಚ್ಚಳ ಮಾಡದಿರಲು ನಿರ್ಣಯಿಸಿತು.

## ದೂರ ಶಿಕ್ಷಣ ನಿರ್ದೇಶನಾಲಯ

**2023–ಸಿಂ–6.18:** ದೂರ ಶಿಕ್ಷಣ ನಿರ್ದೇಶನಾಲಯದ ಆನ್‌ಲೈನ್ ಪ್ರೋಗ್ರಾಮ್ ಕೋರ್ಸ್‌ಗಳ(LMS) ಸಂಬಂಧ ಕರೆಯಲಾಗಿದ್ದ ಇ–ಟೆಂಡರ್ ಕುರಿತಾಗಿ Financial Bid ದಾರರೊಂದಿಗೆ ಮಾತುಕತೆ ನಡೆಸುವ, ದರ ಒಪ್ಪಂದದ ಬಗ್ಗೆ ಹಾಗೂ ಈ ಕುರಿತು ಈ ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದ ಪುನರ್ ಪರಿಶೀಲನೆ ಕುರಿತು.

**ಚರ್ಚೆ:** ಸಭೆಗೆ ಆಹ್ವಾನಿಸಲಾಗಿದ್ದ ದೂರಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರು ಮಾಹಿತಿ ನೀಡುತ್ತಾ, ವಿಶ್ವವಿದ್ಯಾಲಯದ ದೂರ ಶಿಕ್ಷಣ ನಿರ್ದೇಶನಾಲಯವು ವಿದ್ಯಾರ್ಥಿಗಳಿಗೆ ಆನ್‌ಲೈನ್ ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸ್‌ಗಳನ್ನು ನೀಡಲು ಯು.ಜಿ.ಸಿ. ಅನುಮತಿಸಿರುವ ಹಿನ್ನೆಲೆಯಲ್ಲಿ, ಯು.ಜಿ.ಸಿ.ಯ ನಿರ್ದೇಶನದಂತೆ ಆನ್‌ಲೈನ್ ಕೋರ್ಸ್‌ಗಳಿಗೆ ಅಗತ್ಯವಿದ್ದ Development, Implementation and Maintenance of **Learning Management System** for Online Distance Learning (LMS) ಅಳವಡಿಸಿಕೊಂಡು ತುರ್ತಾಗಿ ಪ್ರವೇಶ ಪ್ರಕ್ರಿಯೆ ಆರಂಭಿಸಬೇಕಾಗಿದೆ ಎಂದರು. ದಿನಾಂಕ: 27–07–2023ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ LMSಗಾಗಿ ನಡೆಸಲಾದ ಇ–ಟೆಂಡರ್ ಪ್ರಕ್ರಿಯೆಯಲ್ಲಿ ಎಲ್–1 ಬಿಡ್‌ದಾರರಾಗಿ ಆಯ್ಕೆಯಾಗಿರುವ Pheme Software Pvt. Ltd., Bangalore ಸಂಸ್ಥೆಯೊಂದಿಗೆ ಮಾಡಿಕೊಂಡಿರುವ ಒಪ್ಪಂದದ(ಎಂಓಯು) ಪ್ರಕಾರ ಬಿಡ್‌ನ ಒಟ್ಟು ಮೊತ್ತ ರೂ.1,35,00,000/– (ಒಂದು ಕೋಟಿ ಮೂವತ್ತೈದು ಲಕ್ಷ ರೂಪಾಯಿಗಳು ಮಾತ್ರ) ಗಳನ್ನು ಸದರಿ ಸಂಸ್ಥೆಗೆ ಜಿ.ಎಸ್.ಟಿ. ಯೊಂದಿಗೆ ಎರಡು ಕಂತುಗಳಲ್ಲಿ ಪಾವತಿಸಲು ನಿರ್ಣಯಿಸಲಾಗಿರುವುದನ್ನು ಕೂಲಂಕುಶವಾಗಿ ಪರಿಶೀಲಿಸಲಾಯಿತು.

ಕುಲಸಚಿವರು ಮಾತನಾಡಿ, ಸುಮಾರು 10,000ಕ್ಕಿಂತಲೂ ಹೆಚ್ಚಿನ ವಿದ್ಯಾರ್ಥಿಗಳು ಪ್ರವೇಶ ಪಡೆದಲ್ಲಿ ರೂ.1,35,00,000/–ಗಳಾಗಬಹುದು ಎಂದು ಅಧಿಕ ಮೊತ್ತವನ್ನು ನಿಗದಿಪಡಿಸಿದ್ದಾರೆ. ಅಲ್ಲದೇ, ವಿದ್ಯಾರ್ಥಿಗಳು ಪಾವತಿಸುವ ಶುಲ್ಕದಲ್ಲಿ ಸದರಿ ಸಂಸ್ಥೆಗೆ ಶೇ.55 ಹಾಗೂ ವಿಶ್ವವಿದ್ಯಾಲಯಕ್ಕೆ ಶೇ.45 ಎಂಬುದು ಕೂಡ ಅವೈಜ್ಞಾನಿಕವಾಗಿದೆ. ಬೇರೆ ವಿಶ್ವವಿದ್ಯಾಲಯಗಳಲ್ಲಿ ಕೂಡ ಈ ಮೊಬಲಗು ಬಹಳ ಕಡಿಮೆ ಇದೆ. ಆದುದರಿಂದ ಇದನ್ನು ಪುನರ್‌ಪರಿಶೀಲಿಸಿ LMS Software Installation ಗೆ ರೂ. 25 ಲಕ್ಷಗಳನ್ನು ಹಾಗೂ ವಿದ್ಯಾರ್ಥಿಗಳಿಂದ ಪಡೆಯುವ ಶುಲ್ಕದಲ್ಲಿ ವಿಶ್ವವಿದ್ಯಾಲಯಕ್ಕೆ ಶೇ.70 ಹಾಗೂ ಸೇವಾ ಸಂಸ್ಥೆಗೆ ಶೇ.30ರಷ್ಟು ಮೊಬಲಗನ್ನು ನಿಗದಿಪಡಿಸಬಹುದು ಎಂದರು. ಎಲ್ಲಾ ಸದಸ್ಯರು ಇದಕ್ಕೆ ಸಹಮತಿ ವ್ಯಕ್ತಪಡಿಸಿದರು.

ಮುಂದುವರೆದು ಮಾತನಾಡಿದ ಕುಲಸಚಿವರು, ಹಿಂದಿನ ವರ್ಷಗಳಲ್ಲಿ ವಿವಿಧ ಅಧ್ಯಯನ ಕೇಂದ್ರಗಳಿಂದ ಸುಮಾರು ರೂ.4–5 ಕೋಟಿಗಳಷ್ಟು ಹಣ ಬಾಕಿ ಇದ್ದು, ಅದನ್ನು ವಸೂಲಾತಿ ಮಾಡಲು ಏನು ಕ್ರಮ ವಹಿಸಲಾಗಿದೆ ಎಂದು ಕೇಳಿದರು. ದೂರಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರು ಮಾತನಾಡಿ, ಹಳೆಯ ಶುಲ್ಕ ರೂ.4.23 ಕೋಟಿಗಳಷ್ಟು ವಿವಿಧ ಅಧ್ಯಯನ ಕೇಂದ್ರಗಳಿಂದ ಬರಬೇಕಾದ ಬಾಕಿ ಇದೆ. ಇದರಲ್ಲಿ ಒಂದೇ ಕೇಂದ್ರದಿಂದ ಸುಮಾರು ರೂ.2.92 ಕೋಟಿ ಹಣ ಬಾಕಿ ಇದೆ. ಇದರ ವಸೂಲಾತಿಗಾಗಿ ಹಿಂದಿನ ಆಡಳಿತ ಸಮರ್ಪಕ ಕ್ರಮ ವಹಿಸಲಿಲ್ಲ. ಬಾಕಿ ವಸೂಲಿ ಸಂಬಂಧ ಭದ್ರಾವತಿಯ ಗ್ರಾಮಾಂತರ ಪೋಲೀಸ್ ಠಾಣೆಯಲ್ಲಿ 17 ಮೊಕದ್ದಮೆಗಳನ್ನು ದಾಖಲಿಸಿದ್ದು, ಇದರಲ್ಲಿ ಚೆಕ್ ಬೌನ್ಸ್‌ಗೆ ಸಂಬಂಧಪಟ್ಟ ಒಂದು ಪ್ರಕರಣ ಕೂಡ

ಇದೆ. ಇದರ ವಿರುದ್ಧ ಸದರಿ ಅಧ್ಯಯನ ಕೇಂದ್ರದವರು ಕರ್ನಾಟಕ ಉಚ್ಚನ್ಯಾಯಾಲಯದ ಮೊರೆ ಹೋಗಿದ್ದರು. ಆದರೆ, ವಿಶ್ವವಿದ್ಯಾಲಯವು ಹೈಕೋರ್ಟ್‌ಗೆ ಸರಿಯಾದ ಮಾಹಿತಿ ಹಾಗೂ ದಾಖಲೆಗಳನ್ನು ನೀಡದೇ ಪ್ರಕರಣವನ್ನು ಸರಿಯಾಗಿ ನಿರ್ವಹಿಸಲಿಲ್ಲ. ಇದರಿಂದಾಗಿ, ವಿಶ್ವವಿದ್ಯಾಲಯದ ಅಪೀಲ್ ಹೈಕೋರ್ಟ್‌ನಲ್ಲಿ ವಜಾಗೊಂಡಿದೆ ಎಂದರು. ಸದಸ್ಯರಾದ ಶ್ರೀ ಶಶಿಧರ್ ರವರು ಮಾತನಾಡಿ ಕೋಟ್ಯಾಂತರ ರೂಪಾಯಿ ಶುಲ್ಕ ಬಾಕಿ ಉಳಿಸಿಕೊಂಡಿದ್ದ ಅಧ್ಯಯನ ಕೇಂದ್ರಗಳಿಗೆ ಅಂಕಪಟ್ಟಿಗಳನ್ನು ಏಕೆ ನೀಡಲಾಗಿದೆ? ಇದಕ್ಕೆ ಸಂಬಂಧಪಟ್ಟವರು ಹಾಗೂ ನ್ಯಾಯಾಲಯಕ್ಕೆ ಸರಿಯಾದ ಮಾಹಿತಿ/ದಾಖಲೆಗಳನ್ನು ನೀಡದೇ ನ್ಯಾಯಾಲಯದಲ್ಲಿ ವಿಶ್ವವಿದ್ಯಾಲಯಕ್ಕೆ ಹಿನ್ನಡೆಯಾಗಲು ಕಾರಣರಾದವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದರು.

ಕುಲಸಚಿವರು ಮಾತನಾಡಿ, ಕರ್ನಾಟಕ ಉಚ್ಚನ್ಯಾಯಾಲಯದ ಡಿವಿಜನಲ್ ಬೆಂಚ್‌ಗೆ ಅಪೀಲ್ ಮಾಡಿ ಒಳ್ಳೆಯ ಅಡ್ವೋಕೇಟ್ ಒಬ್ಬರನ್ನು ನೇಮಕ ಮಾಡಿಕೊಂಡು ಅವರಿಗೆ ಸಮರ್ಪಕವಾದ ಮಾಹಿತಿ ಹಾಗೂ ದಾಖಲೆಗಳನ್ನು ಒದಗಿಸುವ ಮೂಲಕ ವಿಶ್ವವಿದ್ಯಾಲಯಕ್ಕೆ ನ್ಯಾಯ ದೊರಕಿಸಿಕೊಡಲು ಪ್ರಯತ್ನ ಪಡಬೇಕು ಎಂದರು. ಎಲ್ಲಾ ಸದಸ್ಯರು ಇದಕ್ಕೆ ಸಹಮತ ವ್ಯಕ್ತಪಡಿಸಿದರು.

ನಿರ್ಣಯ: ಸುಧೀರ್ಘ ಚರ್ಚೆಯ ನಂತರ, ವಿಶ್ವವಿದ್ಯಾಲಯದ ದೂರ ಶಿಕ್ಷಣ ನಿರ್ದೇಶನಾಲಯವು ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ಸ್ನಾತಕ ಮತ್ತು ಸ್ನಾತಕೊತ್ತರ ಪದವಿ ಕೋರ್ಸ್‌ಗಳನ್ನು ನೀಡಲು ಯು.ಜಿ.ಸಿ. ಅನುಮತಿಸಿರುವ ಹಿನ್ನೆಲೆಯಲ್ಲಿ, ಯು.ಜಿ.ಸಿ.ಯ ನಿರ್ದೇಶನದಂತೆ ಆನ್‌ಲೈನ್ ಕೋರ್ಸ್‌ಗಳಿಗೆ ಅಗತ್ಯವಿರುವ Development, Implementation and Maintenance of **Learning Management System** for Online Distance Learning (LMS) ಅಳವಡಿಸಿಕೊಂಡು ಪ್ರವೇಶ ಪ್ರಕ್ರಿಯೆ ಆರಂಭಿಸಲು ಅನುಮತಿಸಿದ ಸಭೆಯು, LMS Software Installation ಗೆ ರೂ.25,00,000/- (ಇಪ್ಪತ್ತೈದು ಲಕ್ಷ ರೂಪಾಯಿಗಳು ಮಾತ್ರ) ಗಳನ್ನು ಎಲ್-1 ಬಿಡ್‌ದಾರರಾಗಿ ಆಯ್ಕೆಯಾಗಿರುವ Pheme Software Pvt. Ltd., Bangalore ಸಂಸ್ಥೆಗೆ ಪಾವತಿಸಲು ಮತ್ತು ಉಳಿದ ವೆಚ್ಚಗಳನ್ನು ಹಂತ ಹಂತವಾಗಿ ಅಗತ್ಯಕ್ಕೆ ಅನುಗುಣವಾಗಿ ಪಾವತಿಸಬಹುದು ಹಾಗೂ ಪ್ರವೇಶ ಪಡೆದ ವಿದ್ಯಾರ್ಥಿಗಳು ಪಾವತಿಸುವ ಶುಲ್ಕದಲ್ಲಿ ಶೇ.70ರಷ್ಟನ್ನು ವಿಶ್ವವಿದ್ಯಾಲಯ ಉಳಿಸಿಕೊಂಡು ಉಳಿದ ಶೇ.30ರಷ್ಟು ಮೊಬಗಲನ್ನು ಸದರಿ ಸಂಸ್ಥೆಗೆ ಪಾವತಿಸಲು ನಿರ್ಣಯಿಸಲಾಯಿತು ಹಾಗೂ Pheme Software Pvt. Ltd., Bangalore ಸಂಸ್ಥೆಗೆ LMS Software Installationಗಾಗಿ ರೂ.1,35,00,000/-ಗಳನ್ನು ಪಾವತಿಸುವಂತೆ ದಿನಾಂಕ:27-07-2023ರಂದು ನಡೆದ ಸಿಂಡಿಕೇಟ್ ಸಭೆಯ ವಿಷಯ ಸಂಖ್ಯೆ:2023-ಸಿಂ-5.12ರಲ್ಲಿ ತೆಗೆದುಕೊಂಡಿರುವ ನಿರ್ಣಯವನ್ನು ಹಿಂಪಡೆಯಲಾಯಿತು ಮತ್ತು ಈ ಹಿಂದೆ ಮಾಡಿಕೊಂಡಿರುವ ಒಪ್ಪಂದವನ್ನು ರದ್ದುಪಡಿಸಿ, ಹೊಸ ಒಪ್ಪಂದ ಮಾಡಿಕೊಳ್ಳಲು ಸಭೆಯು ನಿರ್ಣಯಿಸಿತು.

ಮುಂದುವರೆದು, ದೂರಶಿಕ್ಷಣ ನಿರ್ದೇಶನಾಲಯದ ವಿವಿಧ ಅಧ್ಯಯನ ಕೇಂದ್ರಗಳಿಂದ ಕೋಟ್ಯಾಂತರ ರೂಪಾಯಿಗಳನ್ನು ವಸೂಲಾತಿ ಮಾಡಿಕೊಳ್ಳುವ ಸಲುವಾಗಿ ಉತ್ತಮ ಅಡ್ವೋಕೇಟ್ ಒಬ್ಬರನ್ನು ನೇಮಕ ಮಾಡಿಕೊಂಡು ಅವರಿಗೆ ಸಮರ್ಪಕವಾದ ಮಾಹಿತಿ ಹಾಗೂ ದಾಖಲೆಗಳನ್ನು ಒದಗಿಸುವ ಮೂಲಕ ಡಿವಿಜನಲ್ ಬೆಂಚ್‌ಗೆ ಅಪೀಲ್ ಮಾಡಬೇಕು ಹಾಗೂ ಕೋಟ್ಯಾಂತರ ರೂಪಾಯಿ ಶುಲ್ಕ ಬಾಕಿ ಉಳಿಸಿಕೊಂಡಿರುವ ಅಧ್ಯಯನ ಕೇಂದ್ರಗಳಿಗೆ ಅಂಕಪಟ್ಟಿ ಸೇರಿದಂತೆ ಇತರೆ ದಾಖಲಾತಿಗಳನ್ನು ನೀಡಲು ಕಾರಣಕರ್ತರಾದ ಎಲ್ಲರ ವಿರುದ್ಧ ಹಾಗೂ ನ್ಯಾಯಾಲಯಕ್ಕೆ ಸರಿಯಾದ ಮಾಹಿತಿ/ದಾಖಲೆಗಳನ್ನು ನೀಡದೇ ನ್ಯಾಯಾಲಯದಲ್ಲಿ ವಿಶ್ವವಿದ್ಯಾಲಯಕ್ಕೆ ಹಿನ್ನಡೆಯಾಗಲು ಕಾರಣರಾದವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ನಿರ್ಣಯಿಸಲಾಯಿತು.

**2023-ಸಿಂ-6.19** <u>ಸದಸ್ಯರು ಮಂಡಿಸಿರುವ ಪ್ರಸ್ತಾವನೆಗಳು</u>

(ಎ): ಡಾ. ಎ. ಟಿ. ಪದ್ಮೇಗೌಡ: 2020-21 ಮತ್ತು 2022-23 ಅವಧಿಯಲ್ಲಿ ಮತ್ತು ಇದುವರೆಗೂ ಪರೀಕ್ಷಾಂಗ ವಿಭಾಗದಲ್ಲಿ ಬಂದಿರುವ ವರಮಾನ ಹಾಗೂ ಖರ್ಚಿನ ವಿವರಗಳನ್ನು ದಾಖಲೆಗಳೊಂದಿಗೆ ಸಭೆಗೆ ಮಂಡಿಸುವುದು.

ಹಣಕಾಸು ವಿಭಾಗವು ನೀಡಿದ ದಾಖಲೆಗಳನ್ನು ಸಿಂಡಿಕೇಟ್ ಸದಸ್ಯರಿಗೆ ಒದಗಿಸಲಾಯಿತು. ಪರಿಶೀಲಿಸಿ ಮಾತನಾಡಿದ ಡಾ.ಎ.ಟಿ.ಪದ್ಮೇಗೌಡರವರು ಯು.ಜಿ.ಸಿ. ವೇತನ ಪಡೆಯುತ್ತಿರುವ ವಿಶ್ವವಿದ್ಯಾಲಯದ ಅಧ್ಯಾಪಕರು ಪರೀಕ್ಷಾ ವಿಭಾಗದಲ್ಲಿ ಉಪಕುಲಸಚಿವರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಅವರು ಮೌಲ್ಯಮಾಪನ ಸಮಯದಲ್ಲಿ Custodian/Coordinator ಆಗಿ ಕರ್ತವ್ಯ ನಿರ್ವಹಿಸುವುದಕ್ಕೆ ಪ್ರತಿದಿನ ಸಾವಿರಾರು ರೂಪಾಯಿ ಸಂಭಾವನೆ ಪಡೆಯುತ್ತಿದ್ದಾರೆ. ಯು.ಜಿ.ಸಿ. ವೇತನ ಪಡೆಯುವ ಇವರು ಏಕೆ ಗೌರವ ಸಂಭಾವನೆ ಪಡೆಯಬೇಕು. ಇದರಿಂದಾಗಿ ಪರೀಕ್ಷಾ ಶುಲ್ಕವಾಗಿ ವಿದ್ಯಾರ್ಥಿಗಳು ಪಾವತಿಸುತ್ತಿರುವ ಹಣವು ಅಪವ್ಯಯವಾಗುತ್ತಿದೆ. ಆದುದರಿಂದ, ಇನ್ನು ಮುಂದೆ ಯು.ಜಿ.ಸಿ. ವೇತನ ಪಡೆಯುವ ಉಪಕುಲಸಚಿವರು ಸೇರಿದಂತೆ ಪರೀಕ್ಷಾ ವಿಭಾಗದಲ್ಲಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವ ಯು.ಜಿ.ಸಿ. ವೇತನ ಪಡೆಯುವ ಅಧ್ಯಾಪಕರು ಈ ರೀತಿ ಸಂಭಾವನೆ ಪಡೆಯುವುದನ್ನು ತಕ್ಷಣವೇ ನಿಲ್ಲಿಸಬೇಕು. ಅಲ್ಲದೇ, ಅಧ್ಯಾಪಕರುಗಳು ಉಪಕುಲಸಚಿವರಾಗಿ ಗರಿಷ್ಟ 3 ವರ್ಷಗಳು ಮಾತ್ರ ಕರ್ತವ್ಯ ನಿರ್ವಹಿಸಲು ಅವಕಾಶ ನೀಡಬೇಕು ಎಂದರು.

ಕುಲಸಚಿವರು ಮಾತನಾಡಿ, ಯು.ಜಿ.ಸಿ. ರೆಗ್ಯುಲೇಷನ್ ಪ್ರಕಾರವೇ ಪರೀಕ್ಷಾ ಸಂಭಾವನೆ ಪಾವತಿಸಬೇಕು. ಈ ಹಿನ್ನೆಲೆಯಲ್ಲಿ ಯು.ಜಿ.ಸಿ. ವೇತನ ಪಡೆಯುತ್ತಿರುವ ಪರೀಕ್ಷಾ ವಿಭಾಗದ ಕುಲಸಚಿವರು/ಉಪಕುಲಸಚಿವರಿಗೆ ಸಂಭಾವನೆ ನೀಡುವ ಬಗ್ಗೆ ಪರಿಶೀಲಿಸಿ ನಿರ್ಣಯ ತೆಗೆದುಕೊಳ್ಳಲಾಗುವುದು ಎಂದರು. ಚರ್ಚೆಯ ನಂತರ ಇದನ್ನು ತಕ್ಷಣವೇ ಅನುಷ್ಠಾನಗೊಳಿಸಲು ಸಭೆಯು ಒಪ್ಪಿತು.

**2023–ಸಿಂ–6.19 (ಬಿ):** ಪ್ರಾಧಿಕಾರಗಳಿಂದ ಅನುಮೋದನೆಗೊಂಡಿದ್ದ ಕರಡು ಪರಿನಿಯಮದ ಪ್ರಕಾರ ಅಧ್ಯಾಪಕೇತರ ಉನ್ನತೀಕರಣ ಹುದ್ದೆಗಳಿಗೆ 11 ವರ್ಷಗಳಿಂದ ನೀಡುತ್ತಾ ಬರಲಾಗಿದ್ದ ಬಡ್ತಿಗಳನ್ನು ಸಿಂಡಿಕೇಟ್ ಅನುಮೋದನೆ ಪಡೆಯದೇ ಏಕಾಏಕಿ ಹಿಂಬಡ್ತಿ ಆದೇಶವನ್ನು ಹೊರಡಿಸಿರುವ ಬಗ್ಗೆ.

ವಿಷಯದ ಕುರಿತಾಗಿ ಮಾಹಿತಿ ನೀಡಿ ಮಾತನಾಡಿದ ಕುಲಸಚಿವರು ಅಧ್ಯಾಪಕೇತರ ನೌಕರರ ಉನ್ನತೀಕರಣ ಹುದ್ದೆಗಳಿಗೆ ಸಂಬಂಧಪಟ್ಟಂತೆ 2012ನೇ ಇಸವಿಯಲ್ಲಿ ಪರಿನಿಯಮವನ್ನು ವಿಶ್ವವಿದ್ಯಾಲಯ ಸಿದ್ಧಪಡಿಸಿದೆ. ಇದಕ್ಕೆ ಸರ್ಕಾರದ ಮೂಲಕ ಘನತೆವೆತ್ತ ಕುಲಾಧಿಪತಿಗಳಿಂದ ಅನುಮೋದನೆ ಆಗಬೇಕು. ಆದರೆ, ಪರಿನಿಯಮವು ಕಳೆದ 10–12 ವರ್ಷಗಳಿಂದ ಸರ್ಕಾರ ಹಾಗೂ ವಿಶ್ವವಿದ್ಯಾಲಯದಲ್ಲಿಯೇ ಪರಿಶೀಲನೆಯ ಹಂತದಲ್ಲಿದೆ. ಆದಾಗ್ಯೂ, ವಿಶ್ವವಿದ್ಯಾಲಯದಲ್ಲಿ ಉನ್ನತೀಕರಣ ಪರಿನಿಯಮ ಅನುಮೋದನೆ ಇಲ್ಲದೆಯೇ ನೌಕರರಿಗೆ ಮುಂಬಡ್ತಿ ಹಾಗೂ ಆರ್ಥಿಕ ಸೌಲಭ್ಯಗಳನ್ನು ನೀಡಿದ್ದಾರೆ. ಇದನ್ನು ಸರ್ಕಾರವು ತೀವ್ರವಾಗಿ ಆಕ್ಷೇಪಿಸಿರುತ್ತದೆ. ಉನ್ನತೀಕರಣ ಹುದ್ದೆಗಳಿಗೆ ಬಂದಿರುವ ಆಕ್ಷೇಪಣೆಗಳಿಂದಾಗಿ ವಿಶ್ವವಿದ್ಯಾಲಯದ ಅಧ್ಯಾಪಕೇತರ ನೌಕರರಿಗೆ ಸಕಾಲದಲ್ಲಿ ವೇತನ ಪಾವತಿ ಆಗುತ್ತಿರಲಿಲ್ಲ. ಈ ಹಿನ್ನೆಲೆಯಲ್ಲಿ, ಉನ್ನತೀಕರಣದ ಎಲ್ಲಾ ಆದೇಶಗಳನ್ನು ಹಿಂಪಡೆಯಲಾಗಿದೆ ಎಂದರು. ಡಾ.ಎ.ಟಿ. ಪದ್ಮೇಗೌಡರವರು ಮಾತನಾಡಿ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆದುಕೊಂಡು ಉನ್ನತೀಕರಣದ ಹುದ್ದೆಗಳಿಗೆ ಬಡ್ತಿ ನೀಡಲಾಗಿದೆ. ಆದರೂ ಬಡ್ತಿ ನೀಡಿದ ಆದೇಶಗಳನ್ನು ಹಿಂಪಡೆಯಲಾಗಿದೆ ಎಂದರು.

ಮುಂದುವರೆದು ಮಾತನಾಡಿದ ಕುಲಸಚಿವರು, ಹುದ್ದೆಗಳ ಉನ್ನತೀಕರಣವು ಸರ್ಕಾರದ ನೀತಿ ಮತ್ತು ನಿಯಮಗಳಿಗೆ ಸಂಬಂಧಪಟ್ಟ ವಿಷಯವಾಗಿದ್ದು, ಇದನ್ನು ಸಿಂಡಿಕೇಟ್‌ಗೆ ತರುವ ಅಗತ್ಯ ಇರಲಿಲ್ಲ. ಯಾವುದೇ ಪರಿನಿಯಮವನ್ನು ಸರ್ಕಾರಕ್ಕೆ ಸಲ್ಲಿಸಿದ ನಂತರ, ಕುಲಾಧಿಪತಿಗಳ ಅನುಮೋದನೆ ಇಲ್ಲದೇ ಅನುಷ್ಠಾನಗೊಳಿಸಲು ಕಾನೂನಿನಲ್ಲಿ ಅವಕಾಶವಿಲ್ಲ. ಆದುದರಿಂದ, ಪರಿನಿಯಮ ಅನುಮೋದನೆಯಾಗಿ ಬಂದ ನಂತರ ಉನ್ನತೀಕರಣದ ಎಲ್ಲಾ ಹುದ್ದೆಗಳಿಗೆ ನಿಯಮಾನುಸಾರ ಮುಂಬಡ್ತಿ ನೀಡಲು ಕ್ರಮ ಕೈಗೊಳ್ಳಲಾಗುವುದು ಎಂದರು. ಉನ್ನತೀಕರಣದ ಪರಿನಿಯಮಕ್ಕೆ ಅನುಮೋದನೆ ಪಡೆಯುವ ಪ್ರಕ್ರಿಯೆಯನ್ನು ಚುರುಕುಗೊಳಿಸಲು ಎಲ್ಲಾ ಸದಸ್ಯರು ಕೋರಿದರು.

2023–ಸಿಂ–6.19 (ಸಿ): ವಿಲೀನೀಕರಣ ನೌಕರರಿಗೆ ನೀಡಲಾಗಿದ್ದ ಸೇವಾ ಸೌಲಭ್ಯಗಳನ್ನು ಉಳಿದ ಹಂಗಾಮಿ ವಿಲೀನೀಕರಣ ನೌಕರರಿಗೂ ಅದೇ ರೀತಿ ವಿಸ್ತರಿಸಲು ಸಿಂಡಿಕೇಟ್ ನಿರ್ಣಯ ಆಗಿದ್ದರೂ ಈ ಸಂಬಂಧ ಇನ್ನು ಆದೇಶ ನೀಡದೇ ಇರುವ ಬಗ್ಗೆ.

ಕುಲಸಚಿವರು ಮಾಹಿತಿ ನೀಡುತ್ತಾ, ಇದೇ ವಿಷಯಕ ಕುರಿತಾಗಿ ರಾಜ್ಯದ ಇನ್ನೂ ಕೆಲವು ವಿಶ್ವವಿದ್ಯಾಲಯಗಳಲ್ಲಿ ಸಮಸ್ಯೆ ಇದೆ. ಅಲ್ಲದೇ, ದಿನಾಂಕ:27-07-2023ರಂದು ನಡೆದ ಸಿಂಡಿಕೇಟ್ ಸಭೆಯ ನಡಾವಳಿಗಳು ಅನುಮೋದನೆಯಾಗಿ ಬಂದ ನಂತರ ಈ ಕುರಿತು ಪರಿಶೀಲಿಸಲಾಗುವುದು ಎಂದರು.

2023–ಸಿಂ–6.19 (ಸಿ): ದೂರ ಶಿಕ್ಷಣ ಪರಿಷತ್ತಿನ ವಿವಿಧ ಅಧ್ಯಯನ ಕೇಂದ್ರಗಳಿಂದ ಬರಬೇಕಾದ ಒಟ್ಟು ಶುಲ್ಕಗಳ ಬಾಕಿ ಮೊತ್ತ ಮತ್ತು ಅವುಗಳ ವಸೂಲಾತಿಗೆ ಈವರೆಗೂ ಕೈಗೊಂಡಿರುವ ಕ್ರಮಗಳ ವಿವರಗಳನ್ನು ದಾಖಲೆಗಳೊಂದಿಗೆ ಸಭೆಗೆ ಮಂಡಿಸುವುದು.

ಇದೇ ವಿಷಯದ ಕುರಿತಾಗಿ ವಿಷಯ ಸಂಖ್ಯೆ:2023–ಸಿಂ–6.18ರಲ್ಲಿ ಚರ್ಚೆ ಮತ್ತು ನಿರ್ಣಯವಾಗಿದೆ ಎಂಬುದನ್ನು ಸದಸ್ಯರ ಗಮನಕ್ಕೆ ತರಲಾಯಿತು.

**2023–ಸಿಂ–6.20: ಸರ್ಕಾರದಿಂದ ಬಂದ ಪತ್ರಗಳು/ ರಹಸ್ಯ ವರದಿಗಳ ಮಂಡನೆ**

**ಯಾವುದೂ ಇಲ್ಲ**

**2023–ಸಿಂ–6.21: ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು**

2023–ಸಿಂ–6.21(1): ಡಾ.ಎ.ಟಿ.ಪದ್ಮೇಗೌಡ: ಅರ್ಥಶಾಸ್ತ್ರ ವಿಭಾಗದ ನಿವೃತ್ತ ಪ್ರಾಧ್ಯಾಪಕರು ಕೊಠಡಿ ತೆರವುಗೊಳಿಸದಿರುವ ಕುರಿತು.

ಡಾ. ಎ.ಟಿ. ಪದ್ಮೇಗೌಡರವರು ಮಾತನಾಡಿ ವಿಶ್ವವಿದ್ಯಾಲಯದ ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಪ್ರಾಧ್ಯಾಪಕರಾಗಿದ್ದ ಪ್ರೊ. ಬಿ.ಜಯರಾಂ ಭಟ್‌ರವರು ವಯೋನಿವೃತ್ತಿ ಹೊಂದಿ ಈಗಾಗಲೇ 2 ವರ್ಷಗಳಾಗಿವೆ. ಆದಾಗ್ಯೂ ಅವರಿಗೆ ವಿಭಾಗದಲ್ಲಿ ಒದಗಿಸಲಾಗಿದ್ದ ಕೊಠಡಿಯನ್ನು ಇದುವರೆಗೂ ಖಾಲಿ ಮಾಡಿಲ್ಲ. ಈ ಕುರಿತಾಗಿ ಅವರಿಗೆ ವಿಭಾಗಾಧ್ಯಕ್ಷರು ಹಲವಾರು ಪತ್ರಗಳನ್ನು ನೀಡಿದ್ದಾರೆ. ಆದುದರಿಂದ, ಕೊಠಡಿ ತೆರವುಗೊಳಿಸಿ ಸಂಶೋಧನಾರ್ಥಿಗಳ ಉಪಯೋಗಕ್ಕೆ ಒದಗಿಸುವಂತೆ ಕೋರಿದರು.

ಕುಲಸಚಿವರು ಮಾತನಾಡಿ ಪತ್ರ ಬರೆದರೂ ಕೂಡ ಕೊಠಡಿ ಖಾಲಿ ಮಾಡಿಲ್ಲವಾದರೆ, ನಿಯಮಾನುಸಾರ ಬೀಗ ಒಡೆದು ಕೊಠಡಿ ತೆರೆಯಲು ಕ್ರಮಕೈಗೊಳ್ಳಲಾಗುವುದು ಎಂದರು.

2023–ಸಿಂ–6.21(2): ಡಾ. ಎಂ. ಸ್ವಾಮಿ : ರಾಜ್ಯಶಾಸ್ತ್ರ ವಿಭಾಗದ ಪ್ರೊ. ಎ. ಷಣ್ಮುಖರವರ ಜಾತಿಪ್ರಮಾಣ ಪತ್ರದ ಬಗ್ಗೆ.

ಸದಸ್ಯರಾದ ಡಾ. ಎಂ.ಸ್ವಾಮಿರವರು ಮಾತನಾಡಿ, ವಿಶ್ವವಿದ್ಯಾಲಯದ ಸ್ನಾತಕೋತ್ತರ ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಕರ್ತವ್ಯನಿರ್ವಹಿಸುತ್ತಿರುವ ಪ್ರೊ. ಎ. ಷಣ್ಮುಖ ರವರು ಪರಿಶಿಷ್ಟ ಪಂಗಡ (ವಾಲ್ಮೀಕಿ ನಾಯಕ) ಎಂದು ಸುಳ್ಳು ಜಾತಿ ಪ್ರಮಾಣಪತ್ರ ಪಡೆದು ವಿಶ್ವವಿದ್ಯಾಲಯದಲ್ಲಿ ಉಪನ್ಯಾಸಕ ಹುದ್ದೆಗೆ ನೇಮಕಗೊಂಡಿದ್ದಾರೆ. ಆದರೆ ಅವರು ಮೂಲತ: ತಮಿಳುನಾಡಿನ ವೇಲುಮುರುಗನ್ ಜಾತಿಯವರಾಗಿದ್ದು, ತಮಿಳುನಾಡಿನಲ್ಲಿ ವೇಲುಮುರುಗನ್ ಎಂಬುದು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಬರುವುದಿಲ್ಲ. ಅವರ ಜಾತಿ ಪ್ರಮಾಣಪತ್ರವು ಕರ್ನಾಟಕದಲ್ಲಿ ರದ್ದಾಗಿದೆ. ಆದುದರಿಂದ, ಅವರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಬೇಕು ಎಂದರು. ಸದಸ್ಯರಾದ ಡಾ.ಎ.ಟಿ. ಪದ್ಮೇಗೌಡರವರು ಮಾತನಾಡಿ, ಪ್ರೊ. ಎ.ಷಣ್ಮುಖರವರ ಜಾತಿ

ಪ್ರಮಾಣಪತ್ರ ನಕಲಿಯಾಗಿದ್ದರೆ ನಿಯಮಾನುಸಾರ ಪರಿಶೀಲಿಸಿ ಕ್ರಮ ಕೈಗೊಳ್ಳಬೇಕು ಎಂದರು. ಪ್ರೊ. ಚಂದ್ರಶೇಖರ್‌ರವರು ಮಾತನಾಡಿ ಅವರ ಜಾತಿಪ್ರಮಾಣಪತ್ರದ ಕುರಿತು ಪರಿಶೀಲನೆಯಾಗುವವರೆಗೆ ಅವರಿಗೆ ನೀಡಿರುವ ವಿಶ್ವವಿದ್ಯಾಲಯದ ಎಲ್ಲಾ ಶೈಕ್ಷಣಿಕ ಸಭೆ/ಮಂಡಳಿಗಳ ಸದಸ್ಯತ್ವವನ್ನು ಹಿಂಪಡೆಯಬೇಕು ಎಂದರು.

ಕುಲಸಚಿವರು ಮಾತನಾಡಿ, ಪ್ರೊ. ಎ. ಷಣ್ಮುಖ ರವರ ಪರಿಶಿಷ್ಟ ಪಂಗಡ ಜಾತಿ ಪ್ರಮಾಣ ಪತ್ರದ ಕುರಿತಾಗಿ ಪರಿಶೀಲಿಸಿ, ನಿಯಮಾನುಸಾರ ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು ಎಂದರು.

**2023–ಸಿಂ–6.21(3):** ಮಾನ್ಯ ಕುಲಪತಿಯವರು ಮಾತನಾಡುತ್ತಾ ವಿಶ್ವವಿದ್ಯಾಲಯವು 4ನೇ ಹಂತದ (4th Cycle) ನ್ಯಾಕ್ ಮರು ಮಾನ್ಯತೆಗೆ (Re accreditation) ಅರ್ಜಿ ಸಲ್ಲಿಸುವ ಮುನ್ನ ಹಿಂದಿನ ವರ್ಷಗಳ ವಾರ್ಷಿಕ ಗುಣಮಟ್ಟ ಖಾತ್ರಿ ವರದಿಯನ್ನು (AQAR – Annual Quality Assurance Report) ಸಲ್ಲಿಸುವುದು ಅವಶ್ಯವಾಗಿದೆ. ಆದುದರಿಂದ ವಿಶ್ವವಿದ್ಯಾಲಯವು ಸಿದ್ಧಪಡಿಸಿರುವ 2018ರ ಸೆಪ್ಟಂಬರ್‌ನಿಂದ ರಿಂದ 2023ರ ಆಗಸ್ಟ್‌ವರೆಗಿನ 05ವರ್ಷಗಳ ವರದಿಯನ್ನು ಸಭೆಯ ಅವಗಾಹನೆಗಾಗಿ ಮಂಡಿಸಿದರು.

**2023–ಸಿಂ–6.21(4):** ಶ್ರೀ ಶಶಿಧರ್, ಬಿ.ಎನ್.: ದಿನಾಂಕ:27–07–2023ರಂದು ನಡೆದ ಸಿಂಡಿಕೇಟ್ ಸಭೆಯ ನಡಾವಳಿ ಕುರಿತು.

ಸದಸ್ಯರಾದ ಶ್ರೀ ಶಶಿಧರ್ ಬಿ.ಎನ್., ರವರು ಮಾತನಾಡಿ, ಸಿಂಡಿಕೇಟ್ ಸಭೆ ಮುಗಿದ 10 ದಿನಗಳೊಳಗೆ ನಡಾವಳಿಗಳನ್ನು ಎಲ್ಲಾ ಸದಸ್ಯರಿಗೆ ಕಳುಹಿಸಬೇಕು. ಆದರೆ, ದಿನಾಂಕ:27–07–2023 ರಂದು ನಡೆದ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಇನ್ನೂ ಸದಸ್ಯರಿಗೆ ಕಳುಹಿಸಿಲ್ಲ. ಇದರಿಂದಾಗಿ ಸದರಿ ಸಭೆಯ ನಿರ್ಣಯಗಳ ಅನುಷ್ಠಾನವಾಗಲು ವಿಳಂಬವಾಗುತ್ತಿದೆ ಎಂದರು. ಎಲ್ಲಾ ಸದಸ್ಯರು ಇದಕ್ಕೆ ಧ್ವನಿಗೂಡಿಸಿದರು. ಡಾ.ಪದ್ಮೇಗೌಡರವರು ಮಾತನಾಡಿ, ಸದರಿ ನಡಾವಳಿಗಳನ್ನು ಈ ಸಭೆಯಲ್ಲಿಯೇ ಮಂಡಿಸಿ ಅನುಮೋದಿಸಬಹುದು ಎಂದರು.

ಕುಲಸಚಿವರು ಮಾತನಾಡಿ, ಸದರಿ ಸಭೆಯ ನಡಾವಳಿಗಳಿಗೆ ಅಂದಿನ ಕುಲಸಚಿವರು ಹಾಗೂ ಕುಲಪತಿಯವರೇ ಸಹಿ ಮಾಡಬೇಕಾಗಿದ್ದು, ಅವರಿಗೆ ಕಳುಹಿಸಿ ಸಹಿ ಪಡೆಯಲಾಗುವುದು ಎಂದು ನೀಡಿದ ಮಾಹಿತಿಯನ್ನು ಸಭೆಯು ಒಪ್ಪಿತು.

**2023–ಸಿಂ–6.21(5):** ಡಾ. ಸಂಧ್ಯಾ ಕಾವೇರಿ: ಪರೀಕ್ಷಾ ಕೊಠಡಿ ಮೇಲ್ವಿಚಾರಕರಿಗೆ ನೀಡುವ ಸಂಭಾವನೆಯನ್ನು ಸ್ಥಗಿತಗೊಳಿಸಿರುವ ಕುರಿತು.

ಸದಸ್ಯರಾದ ಡಾ. ಸಂಧ್ಯಾ ಕಾವೇರಿಯವರು ಮಾತನಾಡುತ್ತಾ, ವಿಶ್ವವಿದ್ಯಾಲಯದ ಸೆಮಿಸ್ಟರ್ ಪರೀಕ್ಷೆಗಳಲ್ಲಿ ಕರ್ತವ್ಯ ನಿರ್ವಹಿಸುವ ಎಲ್ಲಾ ಕಾಲೇಜುಗಳ ಪರೀಕ್ಷಾ ಕೊಠಡಿ ಮೇಲ್ವಿಚಾರಕರಿಗೆ ನೀಡುವ ಸಂಭಾವನೆಯನ್ನು ಸ್ಥಗಿತಗೊಳಿಸಿದ್ದಾರೆ. ಕಡಿಮೆ ವೇತನ ಪಡೆಯುವ ಅಧ್ಯಾಪಕರಿಗೆ ಇದೊಂದು ಅಲ್ಪ ಸಹಾಯವಾಗಿತ್ತು. ಆದುದರಿಂದ, ಇದನ್ನು ಪುನರ್ ಪರಿಶೀಲಿಸಿ ಯು.ಜಿ.ಸಿ. ವೇತನ ಪಡೆಯದ ಅನುದಾನ ರಹಿತ ಕಾಲೇಜಿನ ಅಧ್ಯಾಪಕರಿಗೆ ಇದನ್ನು ಮಂಜೂರು ಮಾಡುವಂತೆ ಕೋರಿದರು. ಎಲ್ಲಾ ಸದಸ್ಯರು ಇದಕ್ಕೆ ಧ್ವನಿಗೂಡಿಸಿದರು.

ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ, ಇದು ನನ್ನ ಗಮನದಲ್ಲಿದೆ. ಈ ಬಗ್ಗೆ ಪರಿಶೀಲಿಸಿ ಸಕಾರಾತ್ಮಕ ಕ್ರಮಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು.

**2023–ಸಿಂ–6.21(6):** ಡಾ. ಸ್ವಾಮಿ : ವಿದ್ಯಾರ್ಥಿಗಳು ವಿಶ್ವವಿದ್ಯಾಲಯಕ್ಕೆ ಬಂದು ಪರೀಕ್ಷಾ ಶುಲ್ಕ ಹಾಗೂ ದಂಡ ಶುಲ್ಕ ಪಾವತಿಸುತ್ತಿರುವ ಕುರಿತು.

ಡಾ.ಸ್ವಾಮಿರವರು ಮಾತನಾಡಿ, ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕವನ್ನು UUCMS ಮೂಲಕ ಪಾವತಿಸುತ್ತಿದ್ದು, ತಾಂತ್ರಿಕ ತೊಂದರೆಯಿಂದಾಗಿ ವಿಶ್ವವಿದ್ಯಾಲಯಕ್ಕೆ ಪಾವತಿಯಾಗದ ಪ್ರಕರಣಗಳಲ್ಲಿ ಕೆಲವು ವಿದ್ಯಾರ್ಥಿಗಳು ವಿಶ್ವವಿದ್ಯಾಲಯಕ್ಕೆ ಬಂದು ಪರೀಕ್ಷಾ ಶುಲ್ಕದೊಂದಿಗೆ ದಂಡ ಶುಲ್ಕ ರೂ.2,000/–ಗಳು ಸೇರಿದಂತೆ ಒಟ್ಟು ಮೊತ್ತವನ್ನು ಬ್ಯಾಂಕ್‌ನಲ್ಲಿ ಚಲನ್‌ಮೂಲಕ ಪಾವತಿಸುವಂತೆ

ತಿಳಿಸುತ್ತಿದ್ದಾರೆ. ವಿದ್ಯಾರ್ಥಿಗಳು ದೂರದ ಊರುಗಳಿಂದ ವಿಶ್ವವಿದ್ಯಾಲಯಕ್ಕೆ ಬಂದು ಪರೀಕ್ಷಾ ಶುಲ್ಕ ಹಾಗೂ ದಂಡಶುಲ್ಕ ಪಾವತಿಸುವುದು ಹಾಗೂ ಬಸ್‌ಚಾರ್ಜ್ ಭರಿಸುವುದು ಬಡ ವಿದ್ಯಾರ್ಥಿಗಳಿಗೆ ಆರ್ಥಿಕವಾಗಿ ತುಂಭಾ ಹೊರೆಯಾಗುತ್ತದೆ. ಅಲ್ಲದೇ, UUCMS ನಲ್ಲಿ ದಂಡಶುಲ್ಕ ಕೇವಲ ರೂ.200/-ಗಳು ಮಾತ್ರ ಇದ್ದು, ವಿಶ್ವವಿದ್ಯಾಲಯವು ದಂಡಶುಲ್ಕವಾಗಿ ರೂ.2,000/-ಗಳನ್ನು ಪಾವತಿಸುವಂತೆ ತಿಳಿಸುವುದು ಸರಿಯಲ್ಲ ಎಂದರು. ಶ್ರೀ ವಿನಯಕುಮಾರ್ ಶೆಟ್ಟಿರವರು ಮಾತನಾಡಿ ತಮ್ಮದಲ್ಲದ ತಪ್ಪಿಗೆ ವಿದ್ಯಾರ್ಥಿಗಳು ಪರೀಕ್ಷೆ ಹತ್ತಿರದಲ್ಲಿರುವ ಸಮಯದಲ್ಲಿ ವಿಶ್ವವಿದ್ಯಾಲಯಕ್ಕೆ ಅಲೆದಾಡುವುದು, ದಂಡ ಕಟ್ಟುವುದು ಮುಂತಾದವುಗಳಿಂದ ಅವರ ಪರೀಕ್ಷಾಪೂರ್ವ ಸಿದ್ಧತೆಯ ಮೇಲೆ ಹಾಗೂ ಅವರ ಭವಿಷ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ ಎಂದರು. ಕುಲಸಚಿವರು ಮಾತನಾಡಿ UUCMS ನಲ್ಲಿ ಸಮಸ್ಯೆಗಳನ್ನು ಸರಿಪಡಿಸುವ ಬಗ್ಗೆ ಬೆಂಗಳೂರಿನ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿ ಸರಿಪಡಿಸಲಾಗುವುದು. ತಮ್ಮದಲ್ಲದ ತಪ್ಪಿಗೆ ವಿದ್ಯಾರ್ಥಿಗಳು ದೂರದ ಊರುಗಳಿಂದ ವಿಶ್ವವಿದ್ಯಾಲಯಕ್ಕೆ ಬರುವಂತಾಗಬಾರದು ಎಂದರು.

ಕುಲಸಚಿವರು (ಮೌಲ್ಯಮಾಪನ)ರವರು ಮಾತನಾಡಿ ಈ ವಿಷಯವು ನನ್ನ ಗಮನಕ್ಕೆ ಬಂದಿದೆ. UUCMS ನಲ್ಲಿ ಸಮಸ್ಯೆ ಇದ್ದು, ಸಂಬಂಧಪಟ್ಟವರೊಂದಿಗೆ ಚರ್ಚಿಸಿ ಸರಿಪಡಿಸಲಾಗುವುದು ಮತ್ತು ಮುಂದೆ ವಿದ್ಯಾರ್ಥಿಗಳಿಗೆ ಈ ರೀತಿ ತೊಂದರೆಯಾಗದಂತೆ ಕ್ರಮವಹಿಸಲಾಗುವುದು ಎಂದರು.

**2023-ಸಿಂ-6.21(7):** ಡಾ. ಎ.ಟಿ. ಪದ್ಮೇಗೌಡ: ವಯೋನಿವೃತ್ತಿ ಹೊಂದಿದ ನೌಕರರಿಗೆ ನಿವೃತ್ತಿ ಸೌಲಭ್ಯಗಳನ್ನು ಸಕಾಲದಲ್ಲಿ ಮಂಜೂರು ಮಾಡುವ ಬಗ್ಗೆ.

ಡಾ. ಎ.ಟಿ. ಪದ್ಮೇಗೌಡರವರು ಮಾತನಾಡಿ, ವಿಶ್ವವಿದ್ಯಾಲಯದಲ್ಲಿ ಹಲವು ವರ್ಷಗಳ ಕಾಲ ಸೇವೆ ಸಲ್ಲಿಸಿ ವಯೋನಿವೃತ್ತಿ ಹೊಂದಿದ ಅಧ್ಯಾಪಕ ಮತ್ತು ಅಧ್ಯಾಪಕೇತರ ಉದ್ಯೋಗಿಗಳಿಗೆ ನಿವೃತ್ತಿವೇತನದ ಸೌಲಭ್ಯಗಳು ಸಕಾಲದಲ್ಲಿ ಮಂಜೂರಾಗದೇ ಜೀವನ ನಿರ್ವಹಣೆ ಕಷ್ಟವಾಗುತ್ತಿದೆ ಎಂದು ತಿಳಿಸುತ್ತಿದ್ದಾರೆ. ಇದನ್ನು ಆದ್ಯತೆಯ ಮೇರೆಗೆ ಪರಿಗಣಿಸುವಂತೆ ಕೋರಿದರು.

ಈ ಬಗ್ಗೆ ಪರಿಶೀಲಿಸಿ ಕ್ರಮಕೈಗೊಳ್ಳುವುದಾಗಿ ಕುಲಸಚಿವರು ಸಭೆಗೆ ತಿಳಿಸಿದರು.

ಅಂತಿಮವಾಗಿ ಸಭೆಗೆ ಆಗಮಿಸಿ ಸೂಕ್ತ ಸಲಹೆ, ಸಹಕಾರ ನೀಡಿದ ಎಲ್ಲಾ ಸದಸ್ಯರುಗಳಿಗೆ ಕುಲಸಚಿವರು ಹೃತ್ಪೂರ್ವಕವಾಗಿ ವಂದಿಸಿದ ನಂತರ ಸಭೆಯ ಕಲಾಪಗಳು ಮುಕ್ತಾಯವಾದವು.

ಕುಲಸಚಿವರು

**ಕುಲಸಚಿವರು**
**ಕುವೆಂಪು ವಿಶ್ವವಿದ್ಯಾನಿಲಯ**
**ಜ್ಞಾನಸಹ್ಯಾದ್ರಿ**
**ಶಂಕರಘಟ್ಟ-577 451**
**ಶಿವಮೊಗ್ಗ ಜಿಲ್ಲೆ**

ಸಹಿ/-
**ಕುಲಪತಿಗಳು**